**ದಿಃ 17.07.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ವಾದಿ ಪರ ವಕೀಲರವರಿಂದ:**

ನಾನು ಈ ದಾವೆಯಲ್ಲಿ ಅಪ್ರಾಪ್ತ ವಾದಿಯ ಪಾಲನ ಕರ್ತಳಾಗಿರುತ್ತೇನೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನಿಜ ಇವೆ. ನಂತರ ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿ ನಿಶಾನೆಗೊಳಿಸಿಕೊಂಡಿರುತ್ತೇನೆ.

ನಿಪಿ-1 ವಾದಿಯ ಆಧಾರ ಕಾರ್ಡ

ನಿಪಿ-2 ವಾದಿಯ ಪ್ರಗತಿ ಪತ್ರ

ನಿಪಿ-3 ನನ್ನ ಆಧಾರ ಕಾರ್ಡ

ನಿಪಿ-4 ವಾದಿಯ ತಂದೆ ಆಧಾರ ಕಾರ್ಡ

ನಿಪಿ-5 ವಾದಿಯ ಜನನ ಪ್ರಮಾಣ ಪತ್ರ

**ಪಾಟೀ ಸವಾಲುಃ ಪ್ರತಿವಾದಿ 1 ಮತ್ತು 2 ರವರ ಪರ ಮಾನ್ಯ ಎಜಿಪಿ ರವರರಿಂದಃ**

1) ನಾನು 7ನೇ ತರಗತಿ ವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಷಯಗಳ ಮಾಹಿತಿ ಇರುತ್ತದೆ. ನನ ಮಗಳ ಜನನ ಪ್ರಮಾಣ ಪತ್ರದಲ್ಲಿ ನನ್ನ ಹೆಸರು ಮತ್ತು ವಾದಿಯ ತಂದೆಯ ಹೆಸರು ತಪ್ಪಾಗಿ ನಮೂದಾಗಿರುವುದನ್ನು ಸರಿ ಪಡಿಸಿಕೊಳ್ಳಲು ದಾವೆ ಸಲ್ಲಿಸಿರುತ್ತೇನೆ. ವಾದಿ 23.11.2014 ರಲ್ಲಿ ಶಿವಾಪೂರದ ಮನೆಯಲ್ಲಿ ಜನಿಸಿರುತ್ತಾಳೆ. ನನ್ನ ಮಗಳು ಜನಿಸಿದ

ನಂತರ ನಾನು 2ನೇ ಪ್ರತಿವಾದಿಗೆ ನಾನು ನೀಡಿದ ಮಾಹಿತಿಯ ಮೇರೆಗೆ ನಿಪಿ–5 ರಲ್ಲಿ ಮಾಹಿತಿಯನ್ನು ನಮೂದಿಸಿಕೊಂಡಿರುತ್ತಾರೆ ಎಂದರೆ ಸರಿಯಾಲ್ಲಾ ಸಾಕ್ಷಿ ಮುಂದುವರೆದು ತಾವು ಸರಿಯಾಗಿ ಮಾಹಿತಿ ನೀಡಿದ್ದರು ನಿಪಿ–5 ರಲ್ಲಿ ತಪ್ಪಾಗಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ತಪ್ಪು ಇಲ್ಲದಿದ್ದರು ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಾಲ್ಲಾ. ದಾವಾ ಕಾರಣ ಇಲ್ಲದಿದ್ದರು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲಾ.

**ಮರು ವಿಚಾರಣೆ : ಇಲ್ಲ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ಚೈತ್ರಾ ವ ಕುಲಕರ್ಣಿ )
ಹೆಚ್ಚುವರಿ.ದಿ.&ನ್ಯಾದಂ., ಗೋಕಾಕ